ಮೈನಟೈನ್ ಮಾಡುವುದು ಮೂಡಿಗೆರೆ ಪೋಲೀಸ್ ಸ್ಟೇಷನ್‌ಗೆ ಒಂದಕ್ಕೆ ಬಹಳ ಕಷ್ಟವಾಗಿರುತ್ತದೆ. ಮೂಡಿಗೆರೆ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಈ ಹೋಬಳಿಗೆ ಪ್ರತ್ಯೇಕವಾದ ಒಂದು ಪೋಲೀಸ್ ಠಾಣೆಯನ್ನು ಮಂಜೂರು ಮಾಡಬೇಕೆಂಬ ಒತ್ತಾಯ ಬಹಳ ವರ್ಷಗಳಿಂದ ಇರುತ್ತದೆ. ಮೊನ್ನೆ ನಡೆದ ಕೋಮು ಗಲಭೆಗಳು ಈ ಗೋಣೆಬೀಡು ಹೋಬಳಿಯಲ್ಲಿ ನಡೆದಿದ್ದು ಪರಿಸ್ಥಿತಿ ತುಂಬಾ ಗಂಭೀರವಾಗಿತ್ತು. ಆಗಾಗ ಇಲ್ಲಿ ಗಲಭೆಗಳು ನಡೆಯುತ್ತಿದ್ದು ಇಲ್ಲಿ ಪೋಲೀಸ್ ಸ್ಟೇಷನ್ ಒಂದನ್ನು ಕೂಡಲೇ ಮಂಜೂರು ಮಾಡಬೇಕೆಂದು ಒತ್ತಾಯಿಸುತ್ತೇನೆ. ಚಿಕ್ಕಮಗಳೂರು ಜಿಲ್ಲಾ ಪೋಲೀಸ್ ಅಧಿಕಾರಿಯವರು ಗೋಣೆಬೀಡುವಿನಲ್ಲಿ ಪೋಲೀಸ್ ಸ್ಟೇಷನ್ ಒಂದನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಧರ್ಮಸಿಂಗ್ :– ಗೋಣೆಬೀಡುವಿನಲ್ಲಿ ಒಂದು ಪೋಲೀಸ್ ಸ್ಟೇಷನ್ ಮಾಡಬೇಕೆಂದು ಸದಸ್ಯರ ಇಚ್ಛೆ ಇದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ವರ್ಷ ಪೋಲೀಸ್ ಸ್ಟೇಷನ್‌ಗಳನ್ನು ಹೊಸದಾಗಿ ಮಾಡುವಾಗ ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತದೆ.

(3) ಮಂಡ್ಯ ನಗರಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು :

ಶ್ರೀ ಎ.ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರವು ತ್ವರಿತಗತಿಯಲ್ಲಿ ಬೆಳೆದಿದ್ದು, ಪ್ರಸ್ತುತ ಸುಮಾರು ಒಂದೂವರೆ ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಸುಮಾರು 15 ವರ್ಷಗಳ ಹಿಂದೆ ಮಂಡ್ಯ ನಗರಕ್ಕೆ ನೀರು ಸರಬರಾಜು ಯೋಜನೆ ತಯಾರಾಗಿ, ಈಗ್ಗೆ 4–5 ವರ್ಷಗಳಿಂದ ಅನುಷ್ಠಾನಕ್ಕೆ ಬಂದಿದ್ದು ನೀರು ಸರಬರಾಜಾಗುತ್ತಿದೆ. 15 ವರ್ಷಗಳ ಹಿಂದಿನ ಜನಸಂಖ್ಯೆ ಹಾಗು ಪ್ರಸ್ತುತ ಜನಸಂಖ್ಯೆಯಲ್ಲಿ ತುಂಬಾ ವ್ಯತ್ಯಾಸವಿದ್ದು, ಗಣನೀಯ ಪ್ರಮಾಣದಲ್ಲಿ ಜನಸಂಖ್ಯೆ ಹೆಚ್ಚಳವಾಗಿದ್ದು, ನಗರದ ಜನತೆಯ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸಲು ಸಮರ್ಪಕವಾಗಿಲ್ಲ. ಜನತೆಯು ನೀರಿನ ಕೊರತೆಯನ್ನು ಅನುಭವಿಸುತ್ತಿದೆ. ಮಂಡ್ಯ ನಗರಕ್ಕೆ 2ನೇ ಹಂತದ ಕಾವೇರಿ ನೀರಿನ ಯೋಜನೆಯನ್ನು ಪ್ರಾರಂಭ ಮಾಡಬೇಕಾಗುವ ಪರಿಸ್ಥಿತಿ ಇದ್ದು, 2ನೇ ಹಂತದ ಯೋಜನೆ ಸುಮಾರು 13.6 ಕೋಟಿ ರೂ.ಗಳ ಮೊತ್ತದ ಅಂದಾಜು ಸಿದ್ಧವಾಗಿದ್ದು, ಸರ್ಕಾರ ಅಂತಿಮವಾದ ನಿರ್ಧಾರವನ್ನು ಕೈಗೊಳ್ಳಬೇಕಾಗಿದೆ. ಇದರಲ್ಲಿ ಮಂಡ್ಯ ನಗರದ ಜನತೆಯ ಬೇಡಿಕೆಯೂ ಸಹ ಇದೆ. ಈ ಯೋಜನೆ ಜರೂರಾಗಿ ಕಾರ್ಯಗತವಾಗಬೇಕಾಗಿದೆ ಈ ಬಗ್ಗೆ ಸರ್ಕಾರ ಶೀಘ್ರವಾದ ಕ್ರಮವನ್ನು ಕೈಗೊಳ್ಳಬೇಕೆಂದು ನಗರಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಶಿವಮೂರ್ತಿ :– ಉತ್ತರವನ್ನು ಒದಗಿಸಿಕೊಡುತ್ತೇನೆ.

(4) ಬಿಜಾಪುರ ಮತ್ತು ಬಾಗಲಕೋಟೆ ಸಹಕಾರ ನೂಲಿನ ಗಿರಣಿಯನ್ನು ಮುಚ್ಚಿರುವುದರಿಂದ ಕಾರ್ಮಿಕರಿಗೆ ಉಂಟಾಗಿರುವ ತೊಂದರೆ.

SHRI MANOHAR AINAPUR: Bijapur and Bagalkot Co-operative Spinning Mills are closed since 30 months. Each Spinning Mill workers have to get about Rs.60,00,000 payment. Government_has decided to lease out these Mills. What measures Government is taking to help the poor 900 labourers who are on the street since 3 years begging for their rights?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು) :– ರಾಯಚೂರು ಸಹಕಾರಿ ನೂಲಿನ ಗಿರಣಿ ಒಳಗೊಂಡಂತೆ, ಬಿಜಾಪುರ ಸಹಕಾರ ನೂಲಿನ ಗಿರಣಿ (ನಿ), ಬಿಜಾಪುರ ಮತ್ತು ಬಾಗಲಕೋಟೆ ಸಹಕಾರ ನೂಲಿನ ಗಿರಣಿ (ನಿ), ಬಾಗಲಕೋಟೆ ಇವುಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರವು ವಿವಿಧ ಹಂತದಲ್ಲಿ ಪರಿಶೀಲಿಸಿದ್ದು ಪ್ರತಿಯೊಂದು ಘಟಕಕ್ಕೆ ಸುಮಾರು 5–6 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಬರುವುದನ್ನು ಗಮನಿಸಿ, ಮತ್ತು ಈ ಗಿರಣಿಗಳು 2–3 ವರ್ಷಗಳಿಂದ ಕಾರ್ಯಸ್ಥಗಿತ ಗೊಂಡಿರುವ ಕಾರಣ ಆದಷ್ಟು ಬೇಗನೆ ಪುನರಾರಂಭಿಸಲು ಆಸಕ್ತಿಯುಳ್ಳ ಸಂಸ್ಥೆಗಳಿಗೆ ಆದರಲ್ಲೂ ಸಹಕಾರಿ ಸಂಘಗಳಿಗೆ ಆದ್ಯತೆ ಕೊಟ್ಟು ಗುತ್ತಿಗೆ